ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು, ಕರೂರು ಇವರ ನ್ಯಾಯಾಲಯ, ಕರೂರು.

ಸಂ/ಕಂ/ಹ.ಬ./05/2016-17 ದಿನಾಂಕ:01/07/2016

ಉಪಸ್ಥಿತರು: ಜಿ.ಬೈರಣ್ಣ
ಉಪ ತಹಶೀಲ್ದಾರರು, ಕರೂರು.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ರಾಘವೇಂದ್ರ ಮೋಹನ್ ತಂದೆ ದಿವಗಂತ ಬಿ.ಹನುಮಂತಾಚಾರ್ ಎಸ್.ಎನ್ ಪೇಟೆ ಬಳ್ಳಾರಿ | ಶ್ರೀಮತಿ ಪರಿಮಳಾಚಾರ್ ತಂದೆ ದಿವಗಂತ ಭೀಮಾಚಾರ್ ಎಸ್.ಎನ್.ಪೇಟೆ ಬಳ್ಳಾರಿ |

ದಾವಾ ಜಮೀನಿನ ವಿವರ:

| ಗ್ರಾಮದ ಹೆಸರು | ಸರ್ವೆ ನಂ | ವಿಸ್ತೀರ್ಣ (ಎಕರೆ) | ಹ.ಬ ಸಂಖ್ಯೆ: | ವಹಿವಾಟು ಸಂಖ್ಯೆ |
|---|---|---|---|---|
| ಬಲಕುಂದಿ ಗ್ರಾಮ | 54/ಸಿ,<br>55/ಎ3<br>189/ಬಿ1 | 1.69<br>2.11<br>5.08 | ಹೆಚ್47/2015-16 | 212/2015-16 |

**ಪೀಠಿಕೆ:**

ಸಿರುಗುಪ್ಪ ತಾಲೂಕಿನ ಬಲಕುಂದಿ ಗ್ರಾಮದ ಸರ್ವೆ ನಂ: 54/ಸಿ ವಿಸ್ತೀರ್ಣ:1.69 ಸರ್ವೆನಂಬರ್ 55/ಎ3 ವಿಸ್ತೀರ್ಣ 2.11 ಸರ್ವೆ ನಂಬರ್ 189/ಬಿ1 ವಿಸ್ತೀರ್ಣ 5.08 ಸೆಂಟ್ಸ್ ಎಕರೆ ಜಮೀನುಗೆ ಸಂಬಂಧಿಸಿದಂತೆ ಪೋತಿ ಪಟ್ಟಿ ಪ್ರಕಾರ ಬಿ.ರಾಘವೇಂದ್ರ ಮೋಹನ್ ತಂದೆ ದಿವಂಗತ ಬಿ.ಹನುಮಂತಾಚಾರ್ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ಶ್ರೀಮತಿ ಪರಿಮಳಾಚಾರ್ ತಂದೆ ಅಗ್ರಹಾರ ಭೀಮಚಾರಿ ಬಳ್ಳಾರಿ ಇವರು ದಿನಾಂಕ:12-04-2016 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ, ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸು ನೀಡುತ್ತಾ ವಿಚಾರಣೆಯನ್ನು ದಿನಾಂಕ: 17/06/2016, 24/06/2016, 01/07/2016 ಮತ್ತು 08-07-2016 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲಾಯಿತು ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು:

ವಾದಿಗಳಾದ ಶ್ರೀ ಬಿ.ರಾಘವೇಂದ್ರ ಮೋಹನ್ ತಂದೆ ದಿವಂಗತ ಬಿ.ಹನುಮಂತಾಚಾರ್ ಬಳ್ಳಾರಿ ಇವರು ತಂದೆಯಾದ ಬಿ.ಹನುಮಂತಾಚಾರ್ ದಿನಾಂಕ 01-07-2015 ರಂದು ಮರಣ ಹೊಂದಿದ್ದು ಬಲಕುಂದಿ ಗ್ರಾಮದ ಸರ್ವೆ ನಂಬರ್ 189/1, 54ಅ/ಅ, 550/3ರಲ್ಲಿ ತಮ್ಮ ಸಹೋದರರೊಂದಿಗೆ ಪಹಣಿಯಲ್ಲಿ ಹೆಸರು ಹೋಂದಿರುತ್ತಾರೆ ಸದರಿ ಯವರ ವಾರಸುದಾರನಾದ ನಾನು ನನ್ನ ತಂದೆಯವರ ಮರಣ ಸಮರ್ಥನಾ ಪ್ರಮಾಣ ಪತ್ರ ವಂಶವೃಕ್ಷ ಇತರೆ ಆಧಾರಿತ ದಾಖಲೆಗಳೊಂದಿಗೆ ಫೆಬ್ರವರಿ 2016ರಲ್ಲಿ ಪೋತಿ ಪಟ್ಟ ಮಾಡಿ ನನ್ನ ತಂದೆಯ ಹೆಸರು ಬದಲಾಗಿ ನನ್ನ ಹೆಸರನ್ನು ಸೇರಿಸಲು ಕೋರಿದೆ ಕಾರಣ ನನ್ನ ತಂದೆಯ ಬದಲಾಗಿ ಪೋತಿ ಪಟ್ಟ ಮಾಡಿ ನನ್ನ ಹೆಸರು ನಮೂದಿಸಲು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಶ್ರೀಮತಿ ಪರಿಮಳಾಚಾರ್ ತಂದೆ ದಿವಂಗತ ಭೀಮಾಚಾರ್ ಬಳ್ಳಾರಿ ಇವರು ನಮ್ಮ ಹಿರಿಯ ಸಹೋದರನಾದ ಬಿ.ಹನುಮಂತಾಚಾರ್ ಇವರ ಪುತ್ರ ಬಿ.ರಾಘವೇಂದ್ರ ಮೋಹನ್ ರವರು ಪೋತಿ ಪಟ್ಟ ಮಾಡಿಕೊಂಡು ಈಗಾಗಲೇ ಅರ್ಜಿಯನ್ನು ಸಲ್ಲಿಸಿದ್ದು ನಾನು ಈಗಾಗಲೇ ಆಕ್ಷೇಪಣೆ ಸಲ್ಲಿಸಲಾಗಿದ್ದು ಸದರಿ ಆಕ್ಷೇಪಣಾ ಪತ್ರವನ್ನು ಹಿಂದಕ್ಕೆ ಪಡೆದು ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸುತ್ತಾ ನಮ್ಮ ಹಿರಿಯ ಸಹೋದರ ದಿವಂಗತ ಬಿ.ಹನುಮಂತಾಚಾರ್ ತಂದೆ ದಿವಗಂತ ಭೀಮಾಚಾರ್ ಇವರ ಬದಲಾಗಿ ಇವರ ಬದಲಾಗಿ ಇವರ ಮಗ ಬಿ.ರಾಘವೇಂದ್ರ ಮೋಹನ್ ತಂದೆ ದಿವಗಂತ ಬಿ.ಹನುಮಂತಚಾರ್ ಇವರ ಹೆಸರು ಪಹಣಿಯಲ್ಲಿ ನಮೂದಿಸಿ ಜಂಟಿಯಾಗಿ ನಮ್ಮ ಹೆಸರುಗಳನ್ನು ನಮೂದಿಸಿ ಜಂಟಿ ಪಟ್ಟ ಮಾಡಲು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಜಂಟಿ ಪಟ್ಟ ಪೋತಿ ಪಟ್ಟ ಪ್ರಕಾರ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈಕೆಳಕಂಡಂತೆ-

-::ಆದೇಶ::-

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಬಲಕುಂದಿ ಗ್ರಾಮದ ಸರ್ವೇ ನಂಬರ್. 54/ಸಿ ವಿಸ್ತೀರ್ಣ 1.69 ಸರ್ವೆ ನಂಬರ್ 55/ಎ3 ವಿಸ್ತೀರ್ಣ:2.11 ಸರ್ವೆ ನಂಬರ್ 189/ಬಿ1 ವಿಸ್ತೀರ್ಣ 5.08 ಜಮೀನು ಜಂಟಿ ಪೋತಿ ಪ್ರಕಾರ ಬಿ.ರಾಘವೇಂದ್ರ ಮೋಹನ್ ತಂದೆ ಬಿ.ಹನುಮಂತಚಾರ್, ವೆಂಕೋಬಚಾರ್ ತಂದೆ ಅಗ್ರಹಾರ ಭೀಮಾಚಾರಿ, ಪರಿಮಳಾಚಾರ್ ತಂದೆ ಅಗ್ರಹಾರ್ ಭೀಮಾಚಾರ್ ಇವರ ಜಂಟಿ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ

ಈ ಆದೇಶವನ್ನು ದಿನಾಂಕ: 01 -07-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ನಾಡ ಕಛೇರಿ ... ತಹಶೀಲ್ದಾರರು,
ಸಿರುಗುಪ್ಪ ತಾಲ್ಲೂಕು,
ಕರೂರು

ಇದರ ಪ್ರತಿಯನ್ನು: